# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ. 255/2020

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ನಾಗರಾಜ | ಸಿಡಬ್ಲ್ಯೂ-06 | ಪಿಡಬ್ಲ್ಯೂ-02 |
| ತಂದೆಯ/ಗಂಡನ ಹೆಸರು | ಮಹಾದೇವಪ್ಪ ನಂದೂರ | | |
| ವಯಸ್ಸು | 37 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಮಳಖೇಡ | | |

ದಿನಾಂಕ 30-12-2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಈಗ 5-6 ವರ್ಷಗಳ ಹಿಂದೆ ಸಾಯಂಕಾಲ ಮಳಖೇಡ ಚೌರಸ್ತಾದ ಹತ್ತಿರ ಒಂದು ರಸ್ತೆ ಅಪಘಾತ ಆಗಿತ್ತು. ನಮ್ಮ ಊರಿನ ಶಿವಶರಣಪ್ಪ ಇವರಿಗೆ ಒಂದು ಲಾರಿ ಹಾಸಿ ಅಪಘಾತಪಡಿಸಿತ್ತು. ಲಾರಿಯ ಸಂಖ್ಯೆ ನನಗೆ ಗೊತ್ತಿಲ್ಲ. ಲಾರಿಯನ್ನು ಯಾರು ಚಲಾಯಿಸುತ್ತಿದ್ದರು ಎಂದು ಗೊತ್ತಿಲ್ಲ. ಲಾರಿಯನ್ನು ಹೇಗೆ ಚಲಾಯಿಸುತ್ತಿದ್ದರು ಎಂದು ಗೊತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ಕಂಡಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ. ಶಿವಶರಣಪ್ಪ ನಂದೂರ ಇವರಿಗೆ ಏನು ಪೆಟ್ಟಾಗಿತ್ತು ಎಂದು ಹೇಳಲು ಬರುವುದಿಲ್ಲ. ಘಟನೆಯ ಬಗ್ಗೆ ಪೊಲೀಸರು ನನ್ನ ವಿಚಾರಣೆ ಮಾಡಿಲ್ಲ. ಆದರೆ ಪಿ.ಎಮ್.ಗೆ ಕರೆಸಿದ್ದರು. ಲಾರಿ ಚಾಲಕನನ್ನು ಆ ದಿವಸ ನಾನು ನೋಡಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 12-09-2019 ರಂದು ರಾತ್ರಿ 08.00 ಗಂಟೆಗೆ ನಾನು ಮಳಖೇಡ ಎಪಿಎಮ್.ಸಿ ಗೇಟ ಹತ್ತಿರ ಇರುವ ಹೊಟೇಲದಲ್ಲಿ ಚಹಾ ಕುಡಿದು ರೋಡ ಮೇಲೆ ಮಾತನಾಡುತ್ತಾ ನಿಂತಿರುವಾಗ ರಾತ್ರಿ 08.25 ಗಂಟೆಗೆ ನಮ್ಮ ದೊಡ್ಡಪ್ಪ ಶಿವಶರಣಪ್ಪ ನದೂರು ಇವರು ಗಣೇಶ ವಿರ್ಸಜನೆಗೆ ಹಲಗಿ ಬಾರಿಸಿ ಮನೆಗೆ ಬರುತ್ತಿದ್ದಾಗ ಕಾಗಿನಾ ನದಿಯ ಕಡೆಯಿಂದ ಮರಳಿ ಮನೆಗೆ ಬರುತ್ತಿದ್ದಾಗ ಚಿತ್ತಾಪುರ ಕಡೆಯಿಂದ ಒಬ್ಬ ಲಾರಿಯ ಚಾಲಕ ಲಾರಿಯನು ಅತೀ

ವೇಗದಿಂದ ಮತ್ತು ನಿಷ್ಕಾಳಜೀತನದಿಂದ ಚಲಾಯಿಸಿಕೊಂಡು ಬಂದು ರಸ್ತೆ ದಾಟುತ್ತಿದ್ದ ನಮ್ಮ ದೊಡ್ಡಪ್ಪನಿಗೆ ಹಾಯಿಸಿ ಅಪಘಾತಪಡಿಸಿದ್ದರಿಂದ ಅವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ನಾನು ನೋಡಿಲ್ಲ. ಅದೇ ರೀತಿ ಲಾರಿ ಚಾಲಕ ಲಾರಿಯನ್ನು ಬಿಟ್ಟು ಓಡಿ ಹೋಗಿರುತ್ತಾನೆ ಎಂದರೆ ನಾನು ನೋಡಿಲ್ಲ. ಲಾರಿಯ ನಂ. ಕೆಎ–32 ಡಿ–3224 ಇತ್ತು ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ದುಡುಕುತನದ ವಾಹನ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–3 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರ್. ಎಮ್. ಆರೋಪಿ ಪರ ವಕೀಲರಿಂದ**

ಏನು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರ. ದ. ನ್ಯಾ ದಂ. ಸೇಡಂ.

*SYH